ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ದೇವಸ್ಥಾನದ ಪೂಜಾರಿಗಳೆಲ್ಲ ಜುಟ್ಟು ಬಿಟ್ಟಿರಲು ಕಾರಣವೇನು?*



ತಮ್ಮ ಜೀವನದಲ್ಲಿನ ಮಿಕ್ಕಿದ್ದೆಲ್ಲಾ ಬೋಳಿಸಿದೆ, ಇಷ್ಟು ಮಾತ್ರ ಉಳಿದಿದೆ ಎಂದು ಸೂಚಿಸಲು!

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಕಪಟ ಸನ್ಯಾಸಿಗಳ ಸಹವಾಸದಿಂದ ದೂರ ಇರಬೇಕಾದರೆ ಮಹಿಳೆಯರು ಏನು ಮಾಡಬೇಕು?*
ದೇವನೆಂಬ ಹೆಡ್ ಆಫೀಸ್‌ನಲ್ಲಿ ನಂಬಿಕೆ ಇಟ್ಟರೆ ಸನ್ಯಾಸಿಗಳೆಂಬ ಬ್ರ್ಯಾಂಚ್ ಆಫೀಸ್‌ಗಳ ಸಹವಾಸವೇ ಬೇಕಾಗುವುದಿಲ್ಲ.

ಎನ್. ವಸಂತಾ, ಬೆಂಗಳೂರು
*ಮೋಹದಲ್ಲಿ ಕೀಚಕನಾಗಿ, ಮೋಸದಲ್ಲಿ ಪಾತಕನಾಗಿ, ಮಾತಿನಲ್ಲಿ ಮಾತ್ರ ಯಾಚಕನಾದವನಿಗೆ ಬಹುಮಾನವುಂಟೆ?*
ಬಹುಮಾನದ ಮಾತು ಅಂತಿರಲಿ; ಮೊದಲಿಗೆ, ಮಾನ ಉಂಟೆ?

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಅಧ್ಯಯನಕ್ಕೆಂದು ವಿದೇಶಕ್ಕೆ ಹೋಗಿಬರುವ ಶಾಸಕರಿಗೆ ಲಿಖಿತ ಪರೀಕ್ಷೆ ನಡೆಸಿದರೆ ಹೇಗೆ?*



ಊಹೂಂ; ಅವರಿಗೆ ಯೋಗ್ಯವಾದದ್ದು ಒಂದೇ ಪರೀಕ್ಷೆ – ಮಂಪರು ಪರೀಕ್ಷೆ.

ಬಿ.ಎನ್. ಸೊಲ್ಲಾಪುರ, ಬೀದರ್
*ಮಹಾತ್ಮಗಾಂಧೀಜಿಯವರೊಂದಿಗೆ ಹೊರಟುಹೋದ ವಿಷಯ ಯಾವುದು ಸರ್?*
ಮೊಳದಗಲ ಬಟ್ಟೆ ತೊಟ್ಟರೂ ಜಗದಗಲ ಗೌರವ ಸಂಪಾದಿಸಲು ಸಾಧ್ಯವೆಂಬ ವಿಷಯ!

ಎಂ.ಆರ್. ಪವನ್‌ಕುಮಾರ್, ಬಳ್ಳಾರಿ
*ಹಗಲುವೇಷಕ್ಕೂ, ರಾತ್ರಿವೇಷಕ್ಕೂ ಇರುವ ವ್ಯತ್ಯಾಸವೇನು?*
ಹಗಲುವೇಷ ಪ್ರವೃತ್ತಿ, ರಾತ್ರಿವೇಷ ವೃತ್ತಿ!

ವಸಂತರಾವ್ ಕೊರ್ತಿ, ವಿಜಾಪುರ
*ಮೀಸೆ ಬಂದಾಗ ದೇಶ ಕಾಣುವುದಿಲ್ಲವಂತೆ. ಆಗ ಏನು ಕಾಣುತ್ತದೆ?*
ಕನ್ನಡಿಯಲ್ಲಿ ಮೀಸೆಯನ್ನು ಬಾಚಣಿಗೆಯಿಂದ ಬಾಚಿಕೊಳ್ಳುತ್ತಿರುವ ಯುವಕನ ಪ್ರತಿಬಿಂಬ.

ಆರಿಫ್, ದಾವಣಗೆರೆ
*ಈ ಪ್ರೀತಿ ಯಾವಾಗ, ಹೇಗೆ ಹುಟ್ಟುತ್ತದೆಂಬುದು ಮುಂಚೆಯೇ ತಿಳಿಯುವಂತಿದ್ದರೆ?*
ಯಾರುಯಾರಿಗೋ ಲೈನ್ ಹೊಡೆಯುವುದು ತಪ್ಪುತ್ತಿತ್ತು.

ಪೇಂಟರ್ ಪಾಪು, ಸಂತೇಮರಹಳ್ಳಿ
*ಕೋಟಿ ಕೋಟಿ ಕೂಡಿಟ್ಟರೆ ಮೈತುಂಬಾ ಖಾಯಿಲೆ ಬರುತ್ತಂತೆ ಹೌದಾ?*
ಹಣವೇ ಒಂದು ಖಾಯಿಲೆ ಪಾಪಣ್ಣ; ಅದು ನವೆಯಿದ್ದಂತೆ; ಕೆರೆದುಕೊಂಡಷ್ಟೂ ಹೆಚ್ಚು ಕೆರೆದುಕೊಳ್ಳಬೇಕೆನ್ನಿಸುವ ರೋಗ!

ಜಾಕೋಬ್ ಡಿಸೋಜ, ಕುರುವಳ್ಳಿ
*ಪ್ರಚೋದನೆ ಮತ್ತು ಪ್ರತಿಕ್ರಿಯೆ ಎಂದರೆ ಏನು ಸಾರ್?*
ಫ್ಲೈಯಿಂಗ್ ಕಿಸ್ ಕೊಡುವುದು ಪ್ರಚೋದನೆ, ಫ್ಲೈಯಿಂಗ್ ಕಿಕ್ ಕೊಡುವುದು ಪ್ರತಿಕ್ರಿಯೆ!

ನಾಗ, ಕೃಷ್ಣರಾಜಪುರ
*ಅಣಕು ತುಣುಕಿನ ಮಹಾಶಯ, ನೀವು ಕ್ಲಿಷ್ಟವಾದ ಪ್ರಶ್ನೆಗಳಿಗೆ ಉತ್ತರಿಸಲು ತಿಣುಕಾಡುತ್ತೀರಾ?*
ತುಳುಕುವಷ್ಟು ಉತ್ತರಗಳು ಹೊಳೆಯುವಾಗ ತಿಣುಕುವುದು ಅನಗತ್ಯ!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು
*ಬೆಳ್ಳುಳ್ಳಿಯು ಬೆಳ್ಳಗೆ ಸುಂದರವಾಗಿದ್ದರೂ ರುಚಿಯಲ್ಲಿ ಅಷ್ಟೇ ಖಾರವಿರುವುದೇಕೆ?*
ಸುಂದರವಾಗಿದ್ದ ಮೇಲೆ ಹಾಟ್ ಆಗಿರುವುದು ಸಹಜ!

ಎಂ.ಎನ್. ಸೋಮಶೇಖರ್, ಮೈಸೂರು
*ಮಠಾಧಿಪತಿಗಳು ತಮ್ಮ ಹೆಸರಿನಲ್ಲಿ ಆನಂದ ಎಂಬ ಪದವನ್ನು ಸೇರಿಸಿಕೊಳ್ಳಲು ಕಾರಣವೇನು?*
ಅದು ಧರ್ಮ ವಿಶ್ವವಿದ್ಯಾಲಯದಲ್ಲಿ ಪುಕ್ಕಟೆಯಾಗಿ ದೊರೆಯುವ ಡಿಗ್ರಿಯಂತೆ!

## ಬಹುಮಾನಿತ ಪ್ರಶ್ನೆ

ಎಲ್. ಗಿರಿಜಾರಾಜ್, ಬೆಂಗಳೂರು
*ಬದುಕೇ ಗೊಂಡಾರಣ್ಯವಾಗಿದೆ. ಹೆಜ್ಜೆಹೆಜ್ಜೆಗೂ ಹುಲಿ, ಕರಡಿ, ಘೇಂಡಾಮೃಗಗಳೇ ಸಿಗುತ್ತವಲ್ಲ, ಏಕೆ ಗುರು?*
ಛೆ! ನೀವು ನಿಮ್ಮ ಗಂಡ, ಬಾಸ್ ಮತ್ತು ಮಾವನನ್ನು ಈ ರೀತಿ ಹೋಲಿಸುವುದು ತರವಲ್ಲ ಬಿಡಿ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಪ್ರೀತಿಪಾತ್ರರು ಏನೇ ಅಂದರೂ ಮನಸ್ಸಿಗೆ ನೋವಾಗುವುದಿಲ್ಲವೇಕೆ?*
ಹೃದಯ ಬೆಚ್ಚಗಿದ್ದಾಗ ಬುದ್ಧಿ ತೆಪ್ಪಗಿರುವುದರಿಂದ.

ಪಿ.ಜೆ. ರಾಘವೇಂದ್ರ, ಮೈಸೂರು
*ದಂಡಿಗೆ ಹೆದರಲಿಲ್ಲ, ದಾಳಿಗೆ ಹೆದರಲಿಲ್ಲ; ದಾಸಯ್ಯನ ಗಳ್ಳಾ ಗಂಟೆಗೆ ಹೆದರಿಬಿಟ್ಟರಾ ಮಾಸ್ಟರ್?*
ಅವರು ಹೆದರಿದ್ದು ಬಹಿರಂಗದ ಬುಡುಬುಡಿಕೆಗಲ್ಲ, ಅಂತರಂಗದ ಆತ್ಮಾಭಿಮಾನಕ್ಕೆ!

ಎಚ್.ಆರ್. ದೇಸಾಯಿ, ರಾಯಚೂರು
*ಕವಿಗಳಿಗೆ ಕವಿತೆ ಬರೆಯಲು ಚಂದ್ರ ಕೊಟ್ಟಷ್ಟು ಸ್ಫೂರ್ತಿಯನ್ನು ಸೂರ್ಯ ಏಕೆ ಕೊಡಲಿಲ್ಲ?*



ಏಕೆಂದರೆ ಸೂರ್ಯನ ಬೆಳಕಿಗೆ ಬೆಳದಿಂಗಳಿನಂತೆ ಹುಚ್ಚು ಕೆರಳಿಸುವ ಶಕ್ತಿಯಿಲ್ಲ.

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಎಷ್ಟೇ ಜಗಿದರೂ ಚೂಯಿಂಗ್ ಗಮ್ ಏಕೆ ನುರಿಯಲ್ಲ?*
ಅದರದು ಜಗ್ಗಿದಷ್ಟೂ ಸಪ್ಪೆಯಾದರೂ ಜೀವಂತವಾಗಿರುವ ಟಿವಿ ಸೀರಿಯಲ್‌ನ ಕಥೆಯ ಗುಣವಂತೆ!

ಬಾ.ರಂ. ಸುರೇಶ್, ಶಿವಮೊಗ್ಗ
*ಗುಡ್‌ನೈಟ್‌ಗೂ, ಮಿಡ್‌ನೈಟ್‌ಗೂ ಏನು ವ್ಯತ್ಯಾಸ?*
ಜನ ವಿದಾಯ ಹೇಳಿದಾಗ ಗುಡ್‌ನೈಟ್, ದಿನ ವಿದಾಯ ಹೇಳಿದಾಗ ಮಿಡ್‌ನೈಟ್.

■ ರಾಮ್